**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.999/2022**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಗುರುಬಸವರಾಜ್ ಬಂಗಾರಿ | ಪ್ರಾಸಾ -1 |
| ತಂದೆಯ ಹೆಸರು | ಃ ಕೊಟ್ರೇಶ್ | ಚಾಸಾ-4 |
| ವಯಸ್ಸು | ಃ 31 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | ಃ ಅಬಕಾರಿ ಪೇದೆ | ದಿನಾಂಕಃ15.03.2023 |
| ವಾಸಸ್ಥಳ | ಃ ಚಿಕ್ಕಮಗಳೂರು | |

**ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದಃ**

ನಾನು ದಿ.03.09.2016 ರಿಂದ ದಿ.30.12.2022 ರವರೆಗೆ ಮೂಡಿಗೆರೆ ಅಬಕಾರಿ ವಲಯದಲ್ಲಿ ಉಪಅಧೀಕ್ಷರ ಕಚೇರಿಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.13.04.2022 ರಂದು ಈ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ಮುದ್ದೆಮಾಲುಗಳು ಹಾಗೂ ಚಾಸಾ-6 ರವರ ವರದಿಯನ್ನು ಪಡೆದುಕೊಂಡು ಅವುಗಳನ್ನು ಕೇಂದ್ರ ರಾಸಾಯನಿಕ ಪ್ರಯೋಗಾಲಯ, ಬೆಂಗಳೂರು ಇಲ್ಲಿಗೆ ಸಲ್ಲಿಸಿರುತ್ತೇನೆ. ದಿ.16.06.2022 ರಂದು ಕೇಂದ್ರ ರಾಸಾಯನಿಕ ಪ್ರಯೋಗಾಲಯ, ಬೆಂಗಳೂರು ರವರ ವರದಿ ಹಾಗೂ ಮುದ್ದೆಮಾಲುಗಳನ್ನು ಚಾಸಾ-6 ರವರಿಗೆ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ನ್ಯಾಯಾಲಯದ ಮುಂದಿರುವ 10 ಬಿಳಿ ಬಣ್ಣದ 250 ಎಂ.ಎಲ್ ಪ್ಲಾಸ್ಟಿಕ್ ಬಾಟಲಿಗಳನ್ನು ನೋಡಿ ಸಾಕ್ಷಿಯು ಅದರಲ್ಲಿದ 9 ಬಾಟಲ್ ಗಳಲ್ಲಿ ಕಳ್ಳಭಟ್ಟಿ ಸಾರಾಯಿ ಒಂದು ಬಾಟಲಿಯಲ್ಲಿ ಬೆಲ್ಲದ ಕೊಳೆ ಇದ್ದು ಅವುಗಳನ್ನು ಕೇಂದ್ರ ರಾಸಾಯನಿಕ ಪ್ರಯೋಗಾಲಯ, ಬೆಂಗಳೂರು ಇಲ್ಲಿಗೆ ಸಲ್ಲಿಸಿ ವರದಿ ಪಡೆದಿರುವುದಾಗಿ ಗುರುತಿಸುತ್ತಾರೆ. ಸದರಿ ಬಾಟಲಿಗಳನ್ನು ಎಂ.ಒ.1 ರಿಂದ 10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಂ.ವಿ.ಜೆ ವಕೀಲರಿಂದಃ**

ನಾನು ಎಂ.ಒ. 1 ರಿಂದ 10 ನ್ನು ರಾಸಾಯನಿಕ ಪರೀಕ್ಷೆಗೆ ಸಲ್ಲಿಸಲಾಗಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ವರದಿಯನ್ನು ನಾನು ತಂದು ಚಾಸಾ-6 ರವರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ದಿನಾಂಕಗಳು ವಾರದ ಯಾವ ದಿನ ಎಂದು ಹೇಳಲಾಗುವುದಿಲ್ಲ. ನಾನು ಹೇಳಿದ ದಿನಾಂಕಗಳಂದು ನಾನು ಕರ್ತವ್ಯದಲ್ಲಿದ್ದ ಬಗ್ಗೆ ಯಾವುದೇ ದಾಖಲಾತಿ ಪಡೆದುಕೊಂಡಿಲ್ಲ ಹಾಗೂ ಈ ದಿನ ಅಂತಹ ಯಾವುದೇ ದಾಖಲಾತಿಗಳನ್ನು ಗುರುತಿಸಿಲ್ಲ. ನಾನು ಯಾವುದೇ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋಗಿರುವುದಿಲ್ಲ ಹಾಗೂ ರಾಸಾಯನಿಕ ವರದಿಯನ್ನು ಸ್ವೀಕರಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಾಕ್ಷಿ ಸಹಿಃ

C/c ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.